ಎ.ಇ.ಓ. ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ. ಆ ಸಮಿತಿಯವರು ಪ್ರಪೋಸಲ್ ಕಳುಹಿಸಬೇಕು. ಶೇಕಡಾ 60 ರಷ್ಟು ನಾವು ಈ ಟೀಚರ್ಸ್ ಫಂಡ್‌ನಿಂದ ಕೊಡುತ್ತೇವೆ. ಇದು ಸರ್ಕಾರದ ಹಣ ಅಲ್ಲ, ಟೀಚರ್ಸ್ ಫಂಡ್‌ನಿಂದ ಕೊಡುವಂಥ ಹಣ. ಆಮೇಲೆ ಶೇಕಡಾ 40ರಷ್ಟು ಹಣ ಸಾರ್ವಜನಿಕರಿಂದ ಬರಬೇಕಾಗಿದೆ. ಸಾರ್ವಜನಿಕರಿಂದ ಬಂದ ಹಣ ಖರ್ಚಾದ ನಂತರ ಎರಡೂವರೆ ಲಕ್ಷದವರೆಗೆ ಟೀಚರ್ಸ್ ಫಂಡ್‌ನಿಂದ ಕೊಡುವಂಥ ಸ್ಕೀಮ್ ಇದು. ಈ ಸ್ಕೀಮ್ ಪ್ರಕಾರ ಈವರೆಗೂ ಪ್ರಪೋಸಲ್ ಬಂದಿಲ್ಲ. ಪ್ರಪೋಸಲ್ ಬಂದರೆ, ಇವತ್ತು ಸಹ ನಮ್ಮಲ್ಲಿ ಏಳು ಕೋಟಿ ರೂಪಾಯಿ ಹಣ ಈ ಫಂಡ್‌ನಲ್ಲಿ ಇರುವುದರಿಂದ, ಆ ಫಂಡ್‌ನಿಂದ ನಾವು ಕೊಡುತ್ತೇವೆ. ಆದರೆ ಪ್ರೊಸೀಜರ್ ಸರಿಯಾಗಿ ಇದುವರೆಗೂ ಆಗಲಿಲ್ಲ. ಆದರ ಪ್ರಪೋಸಲ್ ಸಹ ಸರ್ಕಾರದ ಎದುರು ಇಲ್ಲ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳು

632 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು?

ಆ) ಸರಕಾರದಿಂದ ಎಷ್ಟು ಹುದ್ದೆ ಯಾವ ಆಧಾರದ ಮೇಲೆ ಭರ್ತಿ ಮಾಡಲಾಗಿದೆ?

ಇ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ?

ಉ) ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) 3608 ಹುದ್ದೆಗಳು

ಆ) ದಿನಾಂಕ 31-5-94ರ ವರೆಗೆ ಖಾಲಿ ಇದ್ದ 15,323 ಹುದ್ದೆಗಳನ್ನು ಅಭ್ಯರ್ಥಿಗಳ ವಿದ್ಯಾರ್ಹತೆ ಹಾಗೂ ಮೀಸಲಾತಿಗೆ ಅನುಗುಣವಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ಪಡೆದು ಆಯ್ಕೆ ಮಾಡಿದ್ದಾರೆ.

ಇ) ಧಾರವಾಡ ಜಿಲ್ಲೆಯಲ್ಲಿ ಪ್ರಸ್ತುತ 276 ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರ ಹೀಗಿದೆ.

ರಾಣೆಬೆನ್ನೂರು	37	ಹುಬ್ಬಳ್ಳಿ	02
ರೋಣ	06	ಕಲಘಟಗಿ	16
ಸವಣೂರು	21	ಮಾದರಗಿ	13
ಬ್ಯಾಡಗಿ	22	ನರಗುಂದ	04
ಧಾರವಾಡ	05	ನವಲಗುಂದ	07
ಗದಗ	09	ಶಿಗ್ಗಾಂವ	22
ಹಾನಗಲ್	37	ಶಿರಾಡಿ	07
ಹಾವೇರಿ	22	ಹೊನ್ನಾಳ	13
ಹಿರೇಕೆರೂರು	33		

ಈ) ಶಿಗ್ಗಾಂವ - 22

ಸವಣೂರು - 21

ಉ) ಪ್ರಸ್ತುತ ಸಾಮಾನ್ಯ ನೇಮಕಾತಿ ನಿಯಮಾವಳಿಗಳ ಪ್ರಕಾರ ಆಯ್ಕೆಯಾಗದ ಅಭ್ಯರ್ಥಿಗಳ ಶೇಕಡ 2ರಷ್ಟು ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗಿದ್ದು, ಅಂತಹ ಅಭ್ಯರ್ಥಿಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಾಗೂ ಜಿಲ್ಲೆಗೆ 400 ಹೆಚ್ಚುವರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಮಂಜಾರಾಗಿದ್ದು ಅವುಗಳನ್ನೂ ಸಹ ಸದ್ಯದಲ್ಲಿಯೇ ಭರ್ತಿಮಾಡಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು ಎಂದು ಕೇಳಿದ್ದಕ್ಕೆ ಉತ್ತರದಲ್ಲಿ 3608 ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು 276 ಎಂದು ಹೇಳಿದ್ದಾರೆ; ತಾಲ್ಲೂಕುವಾರು ಮಾಹಿತಿ ಕೇಳಿದಾಗ ನನ್ನ ಮತಕ್ಷೇತ್ರದಲ್ಲಿ 43 ಹುದ್ದೆಗಳು ಖಾಲಿ ಇವೆ.ಈ ಹುದ್ದೆಗಳ ಅಂಕಿಸಂಖ್ಯೆಗಳನ್ನು ನೋಡಿದಾಗ ಇನ್ನೂ ಸುಮಾರು ನಾನು 19.8.94ರಂದು ಇಲಾಖೆಯ ಅಧಿಕಾರಿಗಳನ್ನು ಮತ್ತು ಎ.ಇ.ಒ.ಗಳನ್ನು ಕೇಳಿದೆ. ಸುಮಾರು ನೂರರ ಮೇಲ್ಪಟ್ಟು ಹುದ್ದೆಗಳು ಖಾಲಿ ಇವೆಯೆಂದು ತಿಳಿದುಬಂತು. ನಾನು ಪ್ರತಿಯೊಂದು ಹಳ್ಳಿಗೆ ಹೋದಾಗಲೂ ಮೊದಲು ಶಿಕ್ಷಕರನ್ನು ನಮಗೆ ಕೊಡಿ, ಆಮೇಲೆ ಸಾಕ್ಷರತಾ ಆಂದೋಲನದಂಥ ಕಾರ್ಯಕ್ರಮಗಳನ್ನು ಮಾಡಿರಿ ಎಂಬ ಕೂಗು ಕೇಳಿಬಂತು? ಆದಕಾರಣ ಕೂಡಲೇ ಹುದ್ದೆಗಳನ್ನು ಭರ್ತಿಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಎಲ್ಲೆಲ್ಲಿ ಅಪ್ರೂವ್ಡ್ ಪೋಸ್ಟ್‌ಗಳು ಇವೆ, ಅಲ್ಲೆಲ್ಲ ಫಿಲ್‌ಅಪ್ ಮಾಡಬೇಕೆಂಬ ಸರ್ಕಾರದ ನೀತಿ ಪ್ರಕಾರ, ಎಲ್ಲಿ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಇವೆ, ನಾವು ಅಲ್ಲಿ ಫಿಲ್‌ಅಪ್ ಮಾಡಿದ್ದೇವೆ. 1987ರಲ್ಲಿ ಎಕಾನಮಿ ಆರ್ಡರ್ ಇತ್ತು.ಇದನ್ನು ನಾವು ಕಳೆದವರ್ಷ ತೆಗೆದುಹಾಕಿದ್ದರಿಂದ, ಬೇಕಾದಷ್ಟು ವೇಕೆಂಟ್ ಪೋಸ್ಟ್ ಇದ್ದವು. ಈವರೆಗೆ ಆ ಎಲ್ಲ ವೇಕೆಂಟ್ ಟೀಚರ್ಸ್ ಪೋಸ್ಟ್‌ಗಳನ್ನು ನಾವು ಈ ಒಂದು ಹೊಸ ನೀತಿಯ ಪ್ರಕಾರ ಫಿಲ್‌ಅಪ್ ಮಾಡಿದ್ದೇವೆ. ಆದರೆ ಕೆಲವು ಅಡಿಶನಲ್ ಪೋಸ್ಟ್‌ಗಳು ಇವೆ. ಆ ಅಡಿಶನಲ್ ಪೋಸ್ಟ್‌ಗಳನ್ನು ವೇಕೆಂಟ್ ಪೋಸ್ಟ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಎಲ್ಲಾದರೂ ಇದ್ದರೆ ನಾವು ಬೇಗನೆ ಫಿಲ್‌ಅಪ್ ಮಾಡುತ್ತೇವೆ. ಈವರೆಗೆ ಅಂತಹ ಎಲ್ಲ ಪೋಸ್ಟ್‌ಗಳನ್ನು ಫಿಲ್‌ಅಪ್ ಮಾಡಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ನಾನು ಅಡಿಶನಲ್ ಅಪ್ರೂವ್ಡ್ ಲಿಸ್ಟ್ ಬಗ್ಗೆ ಕೇಳುತ್ತಿಲ್ಲ. ನಮ್ಮ ಮತಕ್ಷೇತ್ರದಲ್ಲಿ ಎಷ್ಟು ಮಂಜೂರಾದ ಶಿಕ್ಷಕರ ಹುದ್ದೆಗಳು ಇವೆ, ಅವುಗಳು ಖಾಲಿ ಇವೆ, ತಮ್ಮ ಉತ್ತರದಲ್ಲೇ 43 ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಅದು 43 ಅಲ್ಲ, ಇನ್ನೂ ಸುಮಾರು ನೂರು ಹುದ್ದೆಗಳು ಖಾಲಿ ಇವೆ. ಅದನ್ನು ತಾವು ಪರಿಶೀಲಿಸಿ ಆದಷ್ಟು ಬೇಗನೆ ಕೊನೆಯಪಕ್ಷ ಮಂಜೂರಾದ ಶಿಕ್ಷಕರ ಹುದ್ದೆಗಳನ್ನಾದರೂ ತುಂಬಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಖಂಡಿತವಾಗಿಯೂ ಮಾಡುತ್ತೇನೆ.

ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

633 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದುವರೆಗೆ ಮಂಜೂರಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸಾರ್ವಜನಿಕರು ಅನೇಕ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಸರಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು?